ಕುಳ್ಳಗೆ, ತೆಳ್ಳಗಿನ ಗಾತ್ರದ ಆಕೆ ತೀರಾ ಹಳತಾದ ನೈಟಿ ತೊಟ್ಟಿದ್ದಳು.

"ಸರ್, ಈಗ ಬಂದೆ." ಅಂತ ಪಕ್ಕದ ಕೋಣೆಗೆ ಧಾವಿಸಿದಳು.

ಬೋಪಯ್ಯ ನಮ್ಮನ್ನು ಆಕೆಯ ಕೋಣೆಯೊಳಕ್ಕೆ ಕರೆದೊಯ್ದ. ನಾವಲ್ಲಿ ಶೋಧನೆಗೆ ತೊಡಗಿದ್ದಾಗ, ತುಸು ಹೊತ್ತಿನಲ್ಲಿ, ಸವಿ ವಾಪಸು ಬಂದಳು. ಆಕೆ ನೈಟಿ ಬದಲಿಸಿ, ಸೆಲ್ವಾರ್ ಧರಿಸಿದ್ದಳು. ಆಕೆಯ ಪುಟ್ಟ ಕಾಯಕ್ಕೆ ಸೆಲ್ವಾರ್ ಕೊಂಚ ದೊಡ್ಡದಿದ್ದಂತೆ ಅನ್ನಿಸಿತು.

"ಪಕ್ಕನೆ, ನನ್ನ ಸೆಲ್ವಾರ್ ಸಿಗಲಿಲ್ಲ. ತಂಗಿಯದ್ದು ಹಾಕಿಕೊಂಡಿದ್ದೇನೆ." ಪೆಚ್ಚು ಪೆಚ್ಚಾಗಿ ನಕ್ಕಳು.

ನನ್ನ ಮನದ ಭಾವನೆ ಆಕೆ ಓದಿದಳೇ ಅಂತ ನನಗೆ ಅಚ್ಚರಿಯಾಯಿತು!

"ಇವತ್ತೇ ಮನೆ ಖಾಲಿ ಮಾಡ್ಬೇಕಾ? ಟೈಮ್ ಕೊಡದೇ ಏಳೋಕೆ ಹೇಳೋದು ತಪ್ಪಲ್ವಾ?" ಆಕೆ ಪ್ರಶ್ನಿಸಿದಳು.

"ನಿಮ್ಮ ಸಾಮಾನುಗಳನ್ನು ಇಡೋದಿಕ್ಕೆ ಎರಡು ಕೋಣೆ ಬಿಟ್ಟು ಕೊಡ್ತೀವಿ."

"ನಿಮ್ಗೆ ಇದೇ ಮನೆ ಆಗ್ಬೇಕಾ?"

"ಅದು ಪಕ್ಕಾ ವ್ಯವಹಾರ. ಕಡಿಮೆ ದರದಲ್ಲಿ ಮನೆ ಸಿಗುವಾಗ ಬಿಡೋಕೆ ನಾವೇನು ಮೂರ್ಖರೇ?" ಕರಮಚಂದ ಸಹಜವೆನ್ನುವಂತೆ ಮಾತನಾಡಿದ.

ಆಕೆಯ ಕೋಣೆಯಲ್ಲೂ ನಮಗೆ ಗಮನ ಸೆಳೆಯುವಂತಹದೇನೂ ಕಾಣಲಿಲ್ಲ. ಮೇಜಿನ ಮೇಲಿದ್ದ ವಸ್ತುಗಳನ್ನು ಕುತೂಹಲದಿಂದ ಪರಿಶೀಲಿಸಿದ ಕರಮಚಂದ. ಶೃಂಗಾರ ಸಾಮಾಗ್ರಿಗಳು, ಮೊಬೈಲು ಚಾರ್ಜರು, ಔಷಧಿಯ ಸ್ಟ್ರಿಪ್, ಇತ್ಯಾದಿಗಳಿದ್ದವು. ಕರಮಚಂದನ ತಾಳ್ಮೆ ಅಪಾರ. ಎಲ್ಲವನ್ನೂ ಸಮಗ್ರವಾಗಿ ಪರಿಶೀಲಿಸುತ್ತಿದ್ದ. ಅಲ್ಲಿ ಮಡಚಿಕೊಂಡು ಬಿದ್ದಿದ್ದ ಕಾಗದದ ತುಂಡುಗಳನ್ನೂ ಬಿಡಿಸಿ ನೋಡಿದ. ಯಾವುದೋ ಸಿನಿಮಾ ಟಿಕೇಟು! ಹಳೆಯ ಮೆಡಿಕಲ್ ಬಿಲ್ಲು!! ಆಕೆಯ ಮಗ ಮಂಚದಲ್ಲಿ ಮಲಗಿದ್ದ. ಮಂಚದ ಆ ಬದಿಯಲ್ಲಿದ್ದ ಕಿಡಕಿಯಲ್ಲಿ ಮನೆಯ ಹಿಂಭಾಗ, ಇಳಿಜಾರಿನಲ್ಲಿ ಚಾಚಿಕೊಂಡ ಕಾಫಿ ತೋಟ ಕಾಣಿಸುತ್ತಿತ್ತು. ಕಿಟಕಿಯ ಸನಿಹ ನಿಂತು ತುಸು ಹೊತ್ತು ವೀಕ್ಷಿಸಿದ ಕರಮಚಂದ ಅರ್ಥಗರ್ಭಿತವಾಗಿ ನಕ್ಕ. ಉಳಿದೆರಡು ಕೋಣೆಗಳಲ್ಲೂ ನಾವು ತಪಾಸಣೆ ನಡೆಸಿ, ನಂತರ ಅಲ್ಲಿಂದ ಕೆಳಗಿಳಿದೆವು.

"ಸಾರ್, ವಜ್ರಗಳನ್ನ ಕದ್ದಿದ್ದು ಯಾರು?"

ನಾವು ಕಾರಿಡಾರ್ ಪ್ರವೇಶಿಸುತ್ತಿದ್ದಂತೆ ಪಿಸುದನಿಯಲ್ಲಿ ಬೋಪಯ್ಯ ಕೇಳಿದ.

ಅಷ್ಟರಲ್ಲಿ ವಿರುದ್ಧ ದಿಕ್ಕಿನಿಂದ ವೇಗವಾಗಿ ಬಂದ ರಾಣಿ, ನಮ್ಮನ್ನು ಹಾದು, ತನ್ನ ಕೋಣೆ ಪ್ರವೇಶಿಸಿ, ತನ್ನ ಹಿಂದೆ ಧಡಾರೆಂದು ಕದವಿಕ್ಕಿದಳು. ಆಕೆ ಬಂದುದು ಹಜಾರದ ಕಡೆಯಿಂದ... ಅಂದರೆ ಬೋಪಯ್ಯನ ಕೋಣೆಯನ್ನು ದಾಟಿ!

"ಬಿದ್ದಪ್ಪ, ನಿನಗೆ ಭೂಕಂಪದ ಅನುಭವವಾಯಿತೇ?" ಕರಮಚಂದನ ಪ್ರಶ್ನೆಗೆ ನಾನು ಚಕಿತಗೊಂಡೆ.

"ಹ್ವ... ಹ್ವಾ... ಇಲ್ನೋಡು, ಈ ಬೀಗ ಹೇಗೆ ತೂಗಾಡುತ್ತಿದೆ!"

ಬೋಪಯ್ಯನ ಕೋಣೆಯ ಪಕ್ಕದಲ್ಲಿದ್ದ ಉಗ್ರಾಣದ ಬೀಗ ಜೋರಾಗಿ ತೊನೆದಾಡುತ್ತಿತ್ತು!

★★★

ನಾವು ಬೋಪಯ್ಯನ ಮಲಗುವ ಕೋಣೆಯನ್ನು ಮತ್ತೆ ಪ್ರವೇಶಿಸಿದೆವು. ಕರಮಚಂದ ವೇಗವಾಗಿ ಅಲಮಾರಿನತ್ತ ನಡೆದು, ಪುಸ್ತಕಗಳ ನಡುವೆ ಕೈ ತೂರಿದ.

"ಬೋಪಯ್ಯ, ಇದೇ ತಾನೇ ನಿಮ್ಮ ತಿಜೋರಿಯ ಕೀಲಿ ಕೈ!"

ಕರಮಚಂದನ ಕೈಯಲ್ಲಿದ್ದ ಕೀಲಿ ಕೈ ನೋಡಿ ಬೋಪಯ್ಯ ಅಚ್ಚರಿಯಿಂದ ಬಾಯಿ ಅಗಲಿಸಿದ.

"ಅದನ್ನು ಯಾರು ಅಲ್ಲಿ ತಂದಿರಿಸಿದರು?"